O.S .No.138/2015
PW-1

ದಿನಾಂಕ: 19.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ.ಆರ್.ಹೆಚ್. ವಕೀಲರಿಂದಃ</u>

ದಾವೆಯನ್ನು ಮೃತ 1 ನೇ ಪ್ರತಿವಾದಿ, 2 ಮತ್ತು 3 ನೇ ಪ್ರತಿವಾದಿ ವಿರುದ್ಧ ಹೂಡಿರುತ್ತೇನೆ. ಮೃತ 1 ನೇ ಪ್ರತಿವಾದಿ, 2 ಮತ್ತು 3 ನೇ ಪ್ರತಿವಾದಿಗಳ ತಂದೆ ಹೆಸರು ಚಾಮನಾಯಕ. ಸದರಿಯವರು ಮರೂರು ಗ್ರಾಮದ ವಾಸಿಗಳು. ದಾವೆಯನ್ನು ಸ.ನಂ.8/1 ರ ಸಂಬಂಧ ಹೂಡಲಾಗಿದೆ. ದಾವಾ ಆಸ್ತಿಯ ಚೆಕ್ಕುಬಂಧಿ ಅನುಭವದ ಮೇಲೆ ಬರೆಸಿರುತ್ತೇನೆ. ಹುಳುಗನಹಳ್ಳಿ ಗ್ರಾಮದ ಸ.ನಂ.8, 9 ಮತ್ತು 10 ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ. ಸ.ನಂ.8, 9 ಮತ್ತು 10 ರಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿ ಸ.ನಂ.10 ರಲ್ಲಿ 4 ಎಕರೆ 31 ಗುಂಟೆ ಎಂದು ಹೇಳುತ್ತಾರೆ. ಸ.ನಂ.10 ರ ದಾಖಲಾತಿ ನೋಡಿರುತ್ತೇನೆ. ಸ.ನಂ.10 ಚಿಕ್ಕೇಗೌಡ ಮತ್ತು ಸಣ್ಣತಮ್ಮೇಗೌಡ ರವರ ಹೆಸರನಲ್ಲಿದೆ. ಸ.ನಂ.10 ರ ಚೆಕ್ಕುಬಂಧಿಃ ಪೂರ್ವಕ್ಕೆಃ ಚಿಕ್ಕೇಗೌಡನ ಜಮೀನು, ಪಶ್ಚಿಮಕ್ಕೆಃ ಚಿಕ್ಕಮ್ಮ ರವರ ಜಮೀನು, ಉತ್ತರಕ್ಕೆಃ ಕುಲವಾಡಿ ಇನಾಮ್ತಿ ಜಮೀನು ಮತ್ತು ದಕ್ಷಿಣಕ್ಕೆಃ ಓಣಿ. ಸ.ನಂ.9 ರ ದಾಖಲಾತಿ ನೋಡಿರುತ್ತೇನೆ. ಸ.ನಂ.9 ಚಿಕ್ಕೇಗೌಡ ಮತ್ತು ಸಣ್ಣತಮ್ಮೇಗೌಡ ರವರ ಹೆಸರನಲ್ಲಿದೆ. ಸ.ನಂ.9 ಎಷ್ಟು ಎಕರೆ ವಿಸ್ತೀರ್ಣ ಇದೆ ಎಂದರೆ ಸಾಕ್ಷಿ 2 ಎಕರೆ 7 ಗುಂಟೆ ಎಂದು ಹೇಳುತ್ತಾರೆ. ಸ.ನಂ.9 ರ ಚೆಕ್ಕುಬಂಧಿಃ ಪೂರ್ವಕ್ಕೆಃ ಚಿಕ್ಕೇಗೌಡ, ಈಗ ನನ್ನ ತಾಯಿ ಚಿಕ್ಕಮ್ಮ, ಪಶ್ಚಿಮಕ್ಕೆಃ ಭಾಗ್ಯಮ್ಮ, ಚಿಕ್ಕಮ್ಮ ಮತ್ತು ಚಿಕ್ಕೇಗೌಡ, ಉತ್ತರಕ್ಕೆಃ ಕುಲವಾಡಿ ಇನಾಮ್ತಿ ಜಮೀನು ಮತ್ತು ದಕ್ಷಿಣಕ್ಕೆಃ ನನಗೆ ಸೇರಿದ ಜಮೀನು. ಸ.ನಂ.8 ಎಷ್ಟು ಎಕರೆ ವಿಸ್ತೀರ್ಣ ಇದೆ ಎಂದರೆ ಸಾಕ್ಷಿ 4 ಎಕರೆ 31 ಗುಂಟೆ ಎಂದು ಹೇಳುತ್ತಾರೆ. ಸ.ನಂ.8 ರಲ್ಲಿ ನಾನು, ನನ್ನ ತಾಯಿ ಚಿಕ್ಕಮ್ಮ, ಪ್ರತಾಪ, ಭಾಗ್ಯಮ್ಮ ಮತ್ತು ಸಣ್ಣಸ್ವಾಮಿ, ಸುನಿಲ್ ಇದ್ದೇವೆ ಎಂದು ಹೇಳುತ್ತಾರೆ. ಸದರಿಯವರ ಹೆಸರುಗಳಲ್ಲಿ ಪ್ರತ್ಯೇಕ ಪಹಣಿ ಇದೆ. ಸುನಿಲ್ ಗೆ ಸೇರಿದ 14 ಗುಂಟೆ ಜಮೀನು ಸ.ನಂ.8 ರಲ್ಲಿ ಇದೆ. ಸುನಿಲ್ ಗೆ ಸೇರಿದ ಜಮೀನಿನ ಚೆಕ್ಕುಬಂಧಿಃ ಪೂರ್ವಕ್ಕೆಃ ಚಿಕ್ಕೇಗೌಡ, ಪಶ್ಚಿಮಕ್ಕೆಃ ಚಿಕ್ಕೇಗೌಡ, ಉತ್ತರಕ್ಕೆಃ ಸಣ್ಣಸ್ವಾಮಿ ಮತ್ತು ದಕ್ಷಿಣಕ್ಕೆಃ ಚಿಕ್ಕಮ್ಮ ಎಂದು ಹೇಳುತ್ತಾರೆ.

ಪ್ರತಾಪ ಗೆ ಸೇರಿದ 17 ಗುಂಟೆ ಜಮೀನು ಸ.ನಂ.8 ರಲ್ಲಿ ಇದೆ. ಪ್ರತಾಪಗೆ ಸೇರಿದ ಜಮೀನಿನ ಚೆಕ್ಕುಬಂಧಿಃ ಪೂರ್ವಕ್ಕೆಃ ಚಿಕ್ಕೇಗೌಡ, ಪಶ್ಚಿಮಕ್ಕೆಃ ಚಿಕ್ಕೇಗೌಡ, ಉತ್ತರಕ್ಕೆಃ

ಸಣ್ಣಸ್ವಾಮಿ ಮತ್ತು ದಕ್ಷಿಣಕ್ಕೆ ಭಾಗ್ಯಮ್ಮ ಎಂದು ಹೇಳುತ್ತಾರೆ.

ಭಾಗ್ಯಮ್ಮ ಗೆ ಸೇರಿದ 17 ಗುಂಟೆ ಜಮೀನು ಸ.ನಂ.8 ರಲ್ಲಿ ಇದೆ. ಭಾಗ್ಯಮ್ಮಗೆ ಸೇರಿದ ಜಮೀನಿನ ಚೆಕ್ಕುಬಂಧಿಃ ಪೂರ್ವಕ್ಕೆಃ ಚಿಕ್ಕೇಗೌಡ, ಪಶ್ಚಿಮಕ್ಕೆಃ ಚಿಕ್ಕೇಗೌಡ, ಉತ್ತರಕ್ಕೆಃ ಪ್ರತಾಪ ಮತ್ತು ದಕ್ಷಿಣಕ್ಕೆಃ ಸಣ್ಣಸ್ವಾಮಿಗೌಡ ಎಂದು ಹೇಳುತ್ತಾರೆ.

ಚಿಕ್ಕಮ್ಮ ಗೆ ಸೇರಿದ 1 ಎಕರೆ 9 ಗುಂಟೆ ಜಮೀನು ಸ.ನಂ.8 ರಲ್ಲಿ ಇದೆ. ಚಿಕ್ಕಮ್ಮನಿಗೆ ಸೇರಿದ ಜಮೀನಿನ ಚೆಕ್ಕುಬಂಧಿಃ ಪೂರ್ವಕ್ಕೆಃ ಚಿಕ್ಕೇಗೌಡ, ಪಶ್ಚಿಮಕ್ಕೆಃ ನನಗೆ ಸೇರಿದ ಜಮೀನು, ಉತ್ತರಕ್ಕೆಃ ಸಣ್ಣಸ್ವಾಮಿ ಜಮೀನು ಮತ್ತು ದಕ್ಷಿಣಕ್ಕೆಃ ನನಗೆ ಸೇರಿದ ಜಮೀನು ಎಂದು ಹೇಳುತ್ತಾರೆ.

ಸ.ನಂ.8 ಎಷ್ಟು ಪೋಡುಗಳಾಗಿ ವಿಂಗಡಣೆಗೊಂಡಿದೆ ಎಂದರೆ ಸಾಕ್ಷಿ 5 ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು 6 ಎಂದು ಹೇಳುತ್ತಾರೆ. ಸ.ನಂ.8/1 ನ್ನು ಯಾರು ಉಳುಮೆ ಮಾಡುತ್ತಿದ್ದಾರೆಂದರೆ ಸಾಕ್ಷಿ ನಾನು ಎಂದು ಹೇಳುತ್ತಾರೆ. ಸ.ನಂ.8/1 , 2 ಎಕರೆ 12 ಗುಂಟೆ ವಿಸ್ತೀರ್ಣ ಇದೆ. ಚೆಕ್ಕುಬಂಧಿಃ ಪೂರ್ವಕ್ಕೆಃ ಗೋವಿಂದನಾಯಕ, ಪಶ್ಚಿಮಕ್ಕೆಃ ಯಜಮಾನ ರಾಮೇಗೌಡ, ಉತ್ತರಕ್ಕೆಃ ನಮಗೆ ಸೇರಿದ ಜಮೀನು ಮತ್ತು ದಕ್ಷಿಣಕ್ಕೆಃ 8 ಗುಂಟೆಯಲ್ಲಿರುವ ಚನ್ನೇಗೌಡರ ಮನೆ ಹಾಗೂ ಮರದ್ದೂರು ಬೋರೇಗೌಡ. ಈಗ ಹೇಳಿದ ಚೆಕ್ಕುಬಂಧಿಯನ್ನು ದಾವೆ ಹೂಡುವ ಕಾಲಕ್ಕೆ ವಕೀಲರಿಗೆ ತಿಳಿಸಿ ಬರೆಸಿರುತ್ತೇನೆ. ನೀವು ಹೇಳಿದ ಚೆಕ್ಕುಬಂದಿ ದಾವಾ ಸ್ವತ್ತು ಎಂದರೆ ಸರಿ.

ಪ್ರತಿವಾದಿಗಳ ವಿರುದ್ದ ದಾವೆಯನ್ನು ಜಗಳಕ್ಕೆ ಬರುತ್ತಾರೆಂದು ಹೂಡಿರುತ್ತೇನೆ. ಪ್ರತಿವಾದಿಗಳು ಜಗಳಕ್ಕೆ ಬರುತ್ತಾರೆಂದು ಪೊಲೀಸ್ ಬಳಿ ದೂರು ನೀಡಿರುತ್ತೇನೆ. ಆ ಸಂಬಂಧ ಪೊಲೀಸರು ಯಾವುದೇ ಪ್ರ.ವ.ವ ನ್ನು ದಾಖಲಿಸಿರುವುದಿಲ್ಲ. ಪೊಲೀಸರಿಗೆ ದೂರು ದಾಖಲಿಸಿದ ಬಗ್ಗೆ ದಾಖಲಾತಿ ಇದೆ, ಸಾಕ್ಷಿ ಇಲ್ಲಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಪೊಲೀಸರ ಮುಂದೆ ಜಗಳದ ಸಂಬಂಧ ದೂರು ಕೊಟ್ಟಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವೆ ಹೂಡುವ ಪೂರ್ವದಲ್ಲಿ ಪ್ರತಿವಾದಿಗಳ ವಿರುದ್ದ ತಿಳುವಳಿಕೆ ಪತ್ರ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ತಿಳುವಳಿಕೆ ಪತ್ರದಲ್ಲಿ ಪ್ರತಿವಾದಿಗಳಿಗೆ ಜಗಳ ಮಾಡಬೇಡಿ, ಜಮೀನು ನಮಗೆ ಸೇರಿದ್ದು ಎಂದು ನೀಡಿರುತ್ತೇನೆ. ದೂರು ಕೊಟ್ಟಿದ್ದೇನೆಂದು ಹೇಳಿದ್ದು, ಅದು ನೋಟಿಸ್ ಕೊಡುವ ಮುಂಚಿತವಾಗಿಯೋ, ನಂತರವೋ ಎಂದರೆ ಸಾಕ್ಷಿ ನೋಟೀಸ್ ಕೊಡುವ ಮುಂಚಿತವಾಗಿ ಎಂದು ಹೇಳುತ್ತಾರೆ. ಪ್ರತಿವಾದಿಗಳು ಏನೆಂದು ಜಗಳ ಮಾಡುತ್ತಿದ್ದರು

ಎಂದರೆ ಸಾಕ್ಷಿ ನಮಗೆ ಸೇರಿದ ಜಮೀನಿಗೆ ತಂತಿ ಕಂಬ ಎಳೆಯಬೇಡಿ ಎಂದು ಜಗಳ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಪ್ರತಿವಾದಿಗಳು ಯಾವ ಸ.ನಂ. ಸಂಬಂಧ ಜಗಳ ಮಾಡಿದರು ಎಂದರೆ ಸಾಕ್ಷಿ ಸ.ನಂ.8/1 ರಲ್ಲಿ ಕೆಲಸ ಮಾಡಬೇಕಾದರೆ ಜಗಳ ಮಾಡಿದರು ಎಂದು ಹೇಳುತ್ತಾರೆ. ಪ್ರತಿವಾದಿಗಳು ಎಷ್ಟು ಎಕರೆ ಜಮೀನು ಇದೆ ಎಂದು ಜಗಳ ಮಾಡಿದರು ಎಂದರೆ ಸಾಕ್ಷಿ ಎಕರೆ ಏನು ಹೇಳಿಲ್ಲ, ಸುಮ್ಮನೆ ತೊಂದರೆ ಕೊಟ್ಟರು ಎಂದು ಹೇಳುತ್ತಾರೆ. ಪ್ರತಿವಾದಿಗಳು 2014 ಮಾರ್ಚ್ ರಲ್ಲಿ ನಮಗೆ ತೊಂದರೆ ಕೊಟ್ಟಿರುತ್ತಾರೆ. ಮಾರ್ಚ್ 2014 ರ ಪೂರ್ವದಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯ ಸಂಬಂಧ ತೊಂದರೆ ಕೊಟ್ಟಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸ.ನಂ.8/1 ರ ಮೃತ 1 ನೇ ಪ್ರತಿವಾದಿಗೆ ಸೇರಿದ 1 ಎಕರೆ ಜಮೀನಿಗೆ ಬೇಲಿ ಹಾಕಲು ನೀವು ಹೋದಾಗ ಪ್ರತಿವಾದಿಗಳು ಗಲಾಟೆ ಮಾಡಿದರು ಎಂದರೆ ಸಾಕ್ಷಿ ಅವರಿಗೆ ಸೇರಿದ ಜಮೀನು ಇಲ್ಲ, ಗಲಾಟೆಗೆ ಬಂದಿದ್ದರು ಎಂದು ಹೇಳುತ್ತಾರೆ. ದಾವಾ ಸ್ವತ್ತು ನೀವು ಹೇಳಿದಂತೆ ನಿಮ್ಮ ಸ್ವಾಧೀನಾನುಭವದಲ್ಲಿಲ್ಲ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನೀವು ಸ್ವಾಧೀನಾನುಭವದಲ್ಲಿರುವುದನ್ನು ನೋಡಿದವರು ಇದ್ದಾರಾ ಎಂದರೆ ಸಾಕ್ಷಿ 6 ಜನ ಇದ್ದಾರೆ ಎಂದು ಹೇಳುತ್ತಾರೆ. ಸದರಿಯವರೆಂದರೆ ನಾನು, ನನ್ನ ತಾಯಿಚಿಕ್ಕಮ್ಮ, ಪ್ರತಾಪ, ಭಾಗ್ಯಮ್ಮ ಮತ್ತು ಸಣ್ಣಸ್ವಾಮಿ, ಸುನಿಲ್ ಎಂದು ಹೇಳುತ್ತಾರೆ. ಸದರಿಯವರನ್ನು ಕರೆದುಕೊಂಡು ಬಂದು ಸಾಕ್ಷ್ಯ ನುಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಚಾಮನಾಯಕ ಮೃತಪಟ್ಟ ಎಷ್ಟು ವರ್ಷವಾಯಿತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಾಮನಾಯಕ ರವರನ್ನು ನಾನು ನೋಡಿಲ್ಲ. ನಾನು ಮೂಲತಃ ಬೋರೆಹೊಸಹಳ್ಳಿಯ ವಾಸಿ. ಹುಣಸೂರು ತಾಲ್ಲೂಕು, ಕೊಡಗನಹಳ್ಳಿ ಗ್ರಾಮದ ತಿಮ್ಮನಾಯಕ ರವರ ಮಗ ತಿಮ್ಮಯ್ಯ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ತಿಮ್ಮಯ್ಯ ಮಗ ಮಂಚನಾಯಕ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸ.ನಂ.8/1 ರ 1 ಎಕರೆ ಜಮೀನು ಮಂಚನಾಯಕ ಬಿನ್ ತಿಮ್ಮಯ್ಯ ಮತ್ತು ತಿಮ್ಮಯ್ಯ ಬಿನ್ ತಿಮ್ಮನಾಯಕ ರವರ ಸ್ವಾಧೀನದಲ್ಲಿತ್ತು ಎಂದರೆ ಸರಿಯಲ್ಲ. ಹುಳುಗನಹಳ್ಳಿ ಗ್ರಾಮದ ದೊಡ್ಡಚನ್ನೇಗೌಡ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ. ಹುಳುಗನಹಳ್ಳಿ ಗ್ರಾಮದ ರಾಮೇಗೌಡ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ. ಹುಳುಗನಹಳ್ಳಿ ಗ್ರಾಮದ ಸಣ್ಣೇಗೌಡ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ. ಬಿ.ಸಿ. ಶೇಖರ ಎಂದರೆ ನೀವೇ ಎಂದರೆ ಸರಿ. ಸಣ್ಣೇಗೌಡನಿಗೆ ಸ.ನಂ.8/1 ರ

ಯಾವ ದಿಕ್ಕಿನಲ್ಲಿ ಜಮೀನು ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸ.ನಂ.8/1 ರ ಉತ್ತರ ದಿಕ್ಕಿಗೆ ನಮಗೆ ಸೇರಿದ ಜಮೀನು ಇದೆ. ಸ.ನಂ.8/1 ರ ಪಶ್ಚಿಮಕ್ಕೆ ರಾಮೇಗೌಡರ ಜಮೀನು ಇದೆ. ಸ.ನಂ.8/1 ರ ಯಾವ ದಿಕ್ಕಿಗೆ ದೊಡ್ಡಚನ್ನೇಗೌಡರ ಜಮೀನು ಇದೆ ಎಂದರೆ ಸಾಕ್ಷಿ ಜಮೀನು ಇಲ್ಲ, ದಕ್ಷಿಣಕ್ಕೆ ಮನೆ ಕಟ್ಟಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸ.ನಂ.8/1 ರ ಪೂರ್ವಕ್ಕೆ ದೊಡ್ಡಚನ್ನೇಗೌಡರಿಗೆ ಸೇರಿದ ಜಮೀನು ಇದೆ ಎಂದರೆ ಸಾಕ್ಷಿ ಇಲ್ಲ, ಗೋವಿಂದನಾಯಕ ರವರ ಜಮೀನು ಎಂದು ಹೇಳುತ್ತಾರೆ. ಹುಳುಗನಹಳ್ಳಿ ಗ್ರಾಮದ ಸ.ನಂ.8/1 ರಪೂರ್ವಕ್ಕೆಃ ದೊಡ್ಡಚನ್ನೇಗೌಡ, ಪಶ್ಚಿಮಕ್ಕೆಃ ರಾಮೇಗೌಡ, ಉತ್ತರಕ್ಕೆಃ ನಿಮಗೆ ಸೇರಿದ ಜಮೀನು ಮತ್ತು ದಕ್ಷಿಣಕ್ಕೆಃ ಸಣ್ಣೇಗೌಡರ ಜಮೀನು, ಈ ಮಧ್ಯೆ ಪ್ರತಿವಾದಿಯ ತಂದೆ ಮೃತ ಚಾಮನಾಯಕನಿಗೆ ಸೇರಿದ 1 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ದಿಃ 04.03.1966 ರ ನೊಂದಣಿ ಕ್ರಯ ಪತ್ರದಂತೆ ತಿಮ್ಮನಾಯಕನ ಮಗ ತಿಮ್ಮಯ್ಯ, ತಿಮ್ಮಯ್ಯನ ಮಗ ಮಂಚನಾಯಕನಿಂದ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸುಳ್ಳು. ಸದರಿ ಜಮೀನನ್ನು ದಿಃ 04.03.1996 ರಿಂದ ಚಾಮನಾಯಕ ಬದುಕಿರುವವರೆಗೂ, ಅವರ ಕಾಲವಾದ ನಂತರ ಪ್ರತಿವಾದಿಗಳು ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಮೃತ ಚಾಮನಾಯಕ ಮೂಡಾತ್ಮರು ಎಂದರೆ ಸರಿಯಲ್ಲ. ಮೃತ ಚಾಮನಾಯಕ ಮೂಡಾತ್ಮರಾಗಿರುವುದರಿಂದ ದಿಃ 04.03.1966 ರಂದು ಬರೆಸಿಕೊಂಡ ಕ್ರಯ ಪತ್ರವನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಮೃತ ಚಾಮನಾಯಕ ಕ್ರಯ ಪತ್ರದಂತೆ ಖಾತೆ ಮಾಡಿಸಿಕೊಳ್ಳದೇ ಮೃತ ಪಟ್ಟಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಮೃತ ಚಾಮನಾಯಕ ರವರು ಅನುಭವ ಮಾಡುತ್ತಿದ್ದ ಆಸ್ತಿಯನ್ನು ಅವರು ಮೃತಪಟ್ಟ ನಂತರ ಅವರ ಮಕ್ಕಳು ಅನುಭೋಗದಲ್ಲಿ ಅದನ್ನು ಕಬಳಿಸಲು ಅವರಿಗೆ ನೋಟೀಸ್ ನೀಡಿರುತ್ತೀರಿ ಎಂದರೆ ಸರಿಯಲ್ಲ. ನೀವು ನೀಡಿದ ತಿಳುವಳಿಕೆ ಪತ್ರಕ್ಕೆ ಮೃತ ಚಾಮನಾಯಕ ರವರ ಮಕ್ಕಳು ಉತ್ತರ ಕೊಟ್ಟಿಲ್ಲ ಎಂಬ ಕಾರಣಕ್ಕಾಗಿ ಸುಳ್ಳು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ಮೃತ ಚಾಮನಾಯಕ ಬದುಕಿದ್ದನ್ನು ನೀವು ನೋಡಿದ್ದೀರಿ ಎಂದರೆ ಸರಿಯಲ್ಲ. ಮೃತ ಚಾಮನಾಯಕ ಬದುಕಿದ್ದಾಗ ಸ.ನಂ.8/1 ರ 1 ಎಕರೆ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದುದ್ದನ್ನು ನೀವು ನೋಡಿದ್ದೀರಿ ಎಂದರೆ ಸರಿಯಲ್ಲ. ಚಾಮನಾಯಕ ಮೃತಪಟ್ಟ ವಿಚಾರ ನಿಮಗೆ ಗೊತ್ತು ಎಂದರೆ ಸರಿಯಲ್ಲ. ಮೃತ ಚಾಮನಾಯಕ ರವರು ದಿಃ 04.03.1966 ರಂದು ಅವರ ಹಿಂದಿನ ಮಾಲೀಕರಾದ ತಿಮ್ಮನಾಯಕ ರವರ ಮಗ ತಿಮ್ಮಯ್ಯ, ತಿಮ್ಮಯ್ಯ ರವರ ಮಗ

ಮಂಚನಾಯಕ ರವರಿಂದ ಖರೀದಿ ಮಾಡಿದ ವಿಚಾರ ನಿಮಗೆ ಗೊತ್ತು ಎಂದರೆ ಸರಿಯಲ್ಲ. ಮೃತ ಚಾಮನಾಯಕನನ್ನು ನೋಡಿಲ್ಲ, ಅವರು ಕ್ರಯಕ್ಕೆ ಪಡೆದ ವಿಚಾರ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ 1 ಎಕರೆ ಸ್ವಾದೀನ ಇರುವ ವಿಚಾರ ಗೊತ್ತಿದ್ದರೂ, ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.